ಶ್ರೀ ಎಂ. ವೀರಪ್ಪ ಮೊಯಿಲಿ: ತಾವು ಹೇಳಿದ್ದೀರಿ. ಸಂಪೂರ್ಣ ಕಟ್ಟಡದ ಅವಶ್ಯಕತೆ ಪೂರೈಕೆ ಆಗುವುದಿಲ್ಲ ಎಂದು ತಾವು ಹೇಳಿದ್ದೀರಿ. ನಾನು ಅದಕ್ಕೆ ಅಂದಾಜು ಪಟ್ಟಿ ತಯಾರು ಮಾಡಲಿಕ್ಕೆ ಹೇಳುತ್ತೇನೆ. ಹಣ ಒದಗಿಸಿ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ವಿಶ್ವಾಸದ ಪರವಾಗಿ ಶಿವಮೊಗ್ಗದವರೂ ದಕ್ಷಿಣ ಕನ್ನಡದವರೂ ಒಂದಾಗಿದ್ದಾರೆ.

ಅಧ್ಯಕ್ಷರು : ಮಾನ್ಯ ಇದಿನಬ್ಬನವರೇ, ನಿಮ್ಮ 415(2171)ನೇ ಪ್ರಶ್ನೆಗೆ 20 ದಿವಸಗಳ ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಬಿ.ಎಂ. ಇದಿನಬ್ಬ : ನನ್ನದು ಬಹಳ ಪ್ರಾಮುಖ್ಯವಾದ ಪ್ರಶ್ನೆ.

ಅಧ್ಯಕ್ಷರು : ಅದಕ್ಕೋಸ್ಕರವೇ ಜಾಸ್ತಿ ದಿವಸ ಬೇಕಾಗಿದೆ.

ಶ್ರೀ ಬಿ.ಎಂ. ಇದಿನಬ್ಬ : 20 ದಿವಸಗಳಲ್ಲಿ ನಮ್ಮ ಅಧಿವೇಶನವೇ ಮುಗಿಯುತ್ತದೆ.

ಅಧ್ಯಕ್ಷರು : ಸಾಧಾರಣವಾದ ಪ್ರಶ್ನೆ ಆಗಿದ್ದರೆ ಬೇಗ ಉತ್ತರ ಸಿಗುತ್ತಿತ್ತು. ತಮ್ಮ ಪ್ರಾಮುಖ್ಯವಾದ ಪ್ರಶ್ನೆಗಳಿಗೋಸ್ಕರವಾಗಿ 20 ದಿವಸಗಳು ಬೇಕು.

ಶ್ರೀ ಬಿ.ಎಂ. ಇದಿನಬ್ಬ : ಇದಲ್ಲದೆ, ಮಾನ್ಯ ಗೃಹ ಮಂತ್ರಿಗಳಿಗೆ ಕಳೆದ ಸಾರಿ ಕೊಟ್ಟ ಪ್ರಶ್ನೆ ಕೂಡ ಬಾಕಿ ಉಳಿದಿದೆ.

ಅಧ್ಯಕ್ಷರು : ಅದಕ್ಕೆ ಗ್ರಹ ಬಡಿದಿದೆ.

ಶ್ರೀ ಬಿ.ಎಂ. ಇದಿನಬ್ಬ : ನನ್ನ ಪ್ರಶ್ನೆಗಳಿಗೆ ಒಂದು ಜಾತಿ. ಹೀಗೆ ಅವಕಾಶವನ್ನು ಕೇಳುತ್ತಿದ್ದಾರೆ.

ಅಧ್ಯಕ್ಷರು : ಇದು ಒಂದು ಜಾತಿ ಇದೆ; ಇಲ್ಲಿ ನಡೆಯುತ್ತಾ ಉಂಟು.

ಪ್ರತಿ ಮಂಡಲ ಕೇಂದ್ರಕ್ಕೊಂದು ಗ್ರಂಥಾಲಯವನ್ನು ಪ್ರಾರಂಭಿಸುವುದು

2192 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರ ಪ್ರತಿ ಮಂಡಲ ಕೇಂದ್ರಕ್ಕೊಂದು ಗ್ರಂಥಾಲಯ ಪ್ರಾರಂಭಿಸಲು ಈ ಹಿಂದೆ ಯೋಚಿಸಿತ್ತು. ಈ ವರೆಗೆ ಈ ಗ್ರಂಥಾಲಯಗಳನ್ನು ಎಷ್ಟು ಮಂಡಲ ಕೇಂದ್ರಗಳಲ್ಲಿ ಪ್ರಾರಂಭ ಮಾಡಲಾಗಿದೆ.*

ಆ) *ಈ ಮಂಡಲ ಕೇಂದ್ರಗಳ ಮೇಲ್ವಿಚಾರಕರಿಗೆ ನೀಡಲಾಗುತ್ತಿರುವ ಗೌರವ ಧನ ಎಷ್ಟು?*

ಇ) *ಈ ಮೇಲ್ವಿಚಾರಕರ ಕೆಲಸದ ಸಮಯದ ಅವಧಿಯೇನು, ಅವರಿಂದ ಯಾವ ಯಾವ ಕೆಲಸ ಮಾಡಲಾಗುತ್ತಿದೆ?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು) :

ಅ) ಈವರೆಗೆ 451 ಮಂಡಲ ಕೇಂದ್ರ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ.

ಆ) ಮಾಹೆಯಾನ 300-00 ರೂ.ಗಳು

ಇ) ಬೆಳಿಗ್ಗೆ 8-30 ರಿಂದ 11-30

ಸಂಜೆ 4-00 ರಿಂದ 8-00 ಘಂಟೆಯವರೆಗೆ ಈ ಮೇಲ್ವಿಚಾರಕರು ಮಂಡಲ ಗ್ರಂಥಾಲಯಗಳಲ್ಲಿನ ಗ್ರಂಥಗಳು, ನಿಯತಕಾಲಿಕೆಗಳು ದಿನ ಪ್ರತಿಕೆಗಳು ಇವುಗಳ ಉಸ್ತುವಾರಿ ನಿರ್ವಹಣೆ ಮತ್ತು ಓದುಗರಿಗೆ ಗ್ರಂಥಾಲಯ ಸೇವೆ ನೀಡುವ ಕರ್ತವ್ಯವನ್ನು ನಿರ್ವಹಿಸಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಪ್ರದೇಶದ ಜನತೆಗೆ ಅನುಕೂಲ ಮಾಡಿಕೊಡಬೇಕು ಎಂಬ ದೃಷ್ಟಿಯಿಂದ ಮಂಡಲ ಕೇಂದ್ರಗಳಲ್ಲಿ ಗ್ರಂಥಾಲಯಗಳನ್ನು ಸರ್ಕಾರ ಪ್ರಾರಂಭ ಮಾಡಿದೆ. ಈಗಾಗಲೇ 451 ಮಂಡಲಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ. ಅಲ್ಲಿ ಕೆಲಸ ಮಾಡುವ ಮೇಲ್ವಿಚಾರಕರಿಗೆ ತಿಂಗಳಿಗೆ ಮೂನ್ನೂರು ರೂಪಾಯಿ ಗೌರವ ಧನ ಕೊಡಲಾಗುತ್ತಿದೆ. ಅವರು ಕೆಲಸ ಮಾಡುವಂತಹದು ತಾವು ಉತ್ತರ ಕೊಟ್ಟಿರುವ ಪ್ರಕಾರ, 7ಗಂಟೆ ಕೆಲಸ ಮಾಡುತ್ತಿದ್ದಾರೆ. ಅಂದರೆ ದಿನಕ್ಕೆ 10 ರೂಪಾಯಿ ಬೀಳುತ್ತದೆ. ಅದಕ್ಕಾಗಿ ನಾನು ಕೇಳುವುದು ಏನೆಂದರೆ. ತಮ್ಮಂಥ ಹಿರಿಯ ಸಚಿವರು ಇದ್ದ ಸಂದರ್ಭದಲ್ಲಾದರೂ ಇದರ ಉದ್ದೇಶ ಸಫಲ ಆಗಬೇಕು ಎಂದಿದ್ದರೆ, ದಯಮಾಡಿ ಗೌರವ ಧನ ಅಥವಾ ಬೇರೆ ಯಾವ ರೂಪದಲ್ಲಿ ಅವರಿಗೆ ಕೊಡುತ್ತೀರಿ, ಅದನ್ನು ಕನಿಷ್ಟ ಪಕ್ಷ 750 ರೂಪಾಯಿಗಳಿಗೆ ಏರಿಸದೇ ಇದ್ದರೆ ಅವರು ಜೀತದಾಳುಗಳಾಗಿ ದುಡಿಯುತ್ತಿದ್ದಾರೆ. ನಿಮ್ಮ ಪರ್ಪಸ್ ಸರ್ವೆ ಆಗುವುದಿಲ್ಲ, ಇದು ಮೊದಲನೆಯದು. ಎರಡನೆಯದು ಈ ಗ್ರಂಥಾಲಯಗಳಿಂದ ಗ್ರಾಮೀಣ ಜನರಿಗೆ ಇನ್ನೂ ಹೆಚ್ಚೂ ಅನುಕೂಲವಾಗುವ ದೃಷ್ಟಿಯಿಂದ ತಾವು ಏನಾದರೂ ಸುಧಾರಣೆ ತರುತ್ತೀರ. ಮಂಡಲ ಕೇಂದ್ರಗಳಲ್ಲಿ ಇನ್ನೂ ಗ್ರಂಥಾಲಯಗಳನ್ನು ಪ್ರಾರಂಭ ಮಾಡಿಲ್ಲ. ಅಲ್ಲಿ ಗ್ರಂಥಾಲಯಗಳನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರ ಏನಾದರೂ ಯೋಚನೆ ಮಾಡಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಸರ್ಕಾರ, ರಾಜ್ಯದಲ್ಲಿರುವ ಸುಮಾರು 2537 ಮಂಡಲ ಕೇಂದ್ರಗಳಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸಬೇಕೆಂದು ನಿರ್ಣಯ ತೆಗೆದುಕೊಂಡಿದೆ. ಆ ನಿರ್ಣಯದ ಪ್ರಕಾರ 451 ಮಂಡಲ ಕೇಂದ್ರಗಳಲ್ಲಿ ಈಗಾಗಲೇ ಗ್ರಂಥಾಲಯಗಳನ್ನು ಪ್ರಾರಂಭ ಮಾಡಿದೆ. ಆದರೆ ಸಮಸ್ಯೆ ಏನು ಅಂದರೆ, ಅಲ್ಲಿ ಸರಿಯಾದ ಕಟ್ಟಡಗಳು ಇಲ್ಲ, ಮತ್ತು ಅದನ್ನು ಸರಿಯಾಗಿ ನೋಡಿಕೊಳ್ಳುವವರಿಲ್ಲ ಮತ್ತು ಸರಿಯಾದಂತಹ ವ್ಯವಸ್ಥೆ ಅದರಲ್ಲಿ ಆಗಲಿಲ್ಲ. ಈಗ 451ಕಡೆ ಗ್ರಂಥಾಲಯಗಳನ್ನು ಮಾಡಿದ್ದರೂ ಸರಿಯಾದ ವ್ಯವಸ್ಥೆಯಾಗಿಲ್ಲ. ಆದುದರಿಂದ ಅವನ್ನು ಕನ್‌ಸಾಲಿಡೇಟ್ ಮಾಡಬೇಕು, ಸದ್ಯ ಅವುಗಳನ್ನು ಸರಿಯಾಗಿ ನಿಭಾಯಿಸೋಣ, ಆಮೇಲೆ ಉಳಿದ ಮಂಡಲಗಳಲ್ಲಿ ಗ್ರಂಥಾಲಯಗಳನ್ನು ಮತ್ತು ಇನ್ನೂ ಹೆಚ್ಚಿನ ಹಣವನ್ನು ಒದಗಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಕೂಡ ನಾವು ಬರೆದಿದ್ದೇವೆ. ಇದು ಗ್ರಾಮಾಂತರ ಜನರಿಗೆ ಪ್ರಯೋಜನ ಆಗುವ ಗ್ರಂಥಾಲಯಗಳು ಆಗುವುದರಿಂದ ಇದಕ್ಕೆ ಸರಿಯಾದ ಒಂದು ವ್ಯವಸ್ಥೆ ಮಾಡಬೇಕು ಮತ್ತು ಅದಕ್ಕೆ ಸರಿಯಾದ ಪ್ರೋತ್ಸಾಹವನ್ನು ಕೂಡ ಕೊಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಕೂಡ ಹೇಳಿದ್ದೇನೆ. ಆಮೇಲೆ ಅವರಿಗೆ ಕೊಡುತ್ತಿರುವ ಗೌರವ ಧನ 300 ರೂಪಾಯಿ ಇದೆ, ಅದನ್ನು ಹೆಚ್ಚು ಮಾಡಬೇಕು ಎಂದು ಹೇಳಿದಿರಿ. ತಮಗೆ ಗೊತ್ತಿದೆ, ಇದು ಆನರರಿ ಕೆಪಾಸಿಟಿ ಮೇಲೆ ಇರತಕ್ಕವರೇ ಹೊರತು, ಅವರು ಖಾಯಂ ಆದ ಅಭ್ಯರ್ಥಿಗಳಲ್ಲ. ಆದರೂ ತಾವು ಆ ಹಣದಿಂದ ಅವರು ನಿಭಾಯಿಸುವುದಕ್ಕೆ ಸಾಧ್ಯ ಆಗುವುದಿಲ್ಲ ಎಂದು ಹೇಳಿದ್ದೀರಿ. ನಾವು ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಖಾಯಂ ನೌಕರರಲ್ಲ ಎಂದು ತಾವು ಹೇಳುತ್ತೀರಿ, ಆ ವಿದ್ಯಾವಂತ ನೌಕರ ದಿನಕ್ಕೆ 7 ಗಂಟೆಗಳ ಕಾಲ ಕೆಲಸ ಮಾಡುತ್ತಾನೆ. ಅದನ್ನು ಬಿಟ್ಟು ಅವನು ಏನೂ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಇಂತಹ ಸಂದರ್ಭದಲ್ಲಿ ಅವನಿಗೆ ಬದುಕುವುದಕ್ಕೆ ಒಂದು ಹೊತ್ತಿಗೆ ಊಟಕ್ಕಾದರೂ ವ್ಯವಸ್ಥೆ ಆಗಿದೆ ಇದ್ದರೆ ಅವನಿಂದ ಯಾವ ರೀತಿ ತಾವು ಕೆಲಸವನ್ನು ನಿರೀಕ್ಷೆ ಮಾಡುತ್ತೀರಿ? ಅವನೇ ಕಸಗುಡಿಸುತ್ತಾನೆ. ಅವನೇ ಬಾಗಿಲನ್ನು ತೆಗೆಯುತ್ತಾನೆ.

ಪೂರ್ಣವಾದ ಎಲ್ಲಾ ಕೆಲಸವನ್ನು ಅವನೇ ಮಾಡುತ್ತಾನೆ. ಅಂತಹವನಿಗೆ ಏನಾದರೂ ಮಾನವಿಯತೆಯ ದೃಷ್ಟಿಯಿಂದ 750 ರೂಪಾಯಿಗೆ ಗೌರವ ಧನ, ಏರಿಸದಿದ್ದರೆ ಯಾವ ಉದ್ದೇಶದಿಂದ ತಾವು ಪ್ರಾರಂಭ ಮಾಡಿದ್ದೀರಿ, ಆ ಉದ್ದೇಶ ಸಫಲವಾಗುವುದಿಲ್ಲ. ಅವನು ಬಾಗಿಲೇ ತೆಗೆಯುವುದಿಲ್ಲ. ಸರಿಯಾದ ರೀತಿಯಲ್ಲಿ ನಡೆಯದೆ ಇರುವುದಕ್ಕೆ ಅದೇ ಮೂಲ ಕಾರಣ. ಅಲ್ಲಿ ಏನು ಅವ್ಯವಸ್ಥೆ ಇದೆ ಅದಕ್ಕೆ ಇದೇ ಮೂಲವಾದ ಕಾರಣ. ಈ ವಿಚಾರ ಪತ್ರಿಕೆಗಳಲ್ಲಿ ಬರುತ್ತಿದೆ. ಸಮಯಕ್ಕೆ ಸರಿಯಾಗಿ ಬಾಗಿಲು ತೆರೆಯುವವರಿಲ್ಲ. ಅನೇಕ ಕಡೆ ಹೋರಾಟ ಮಾಡುತ್ತಿದ್ದಾರೆ. ಅದು ಅಗತ್ಯವಿಲ್ಲ. ಇದರ ಬಗ್ಗೆ ಸರ್ಕಾರ ಮುಂದಾಲೋಚನೆ ಮಾಡಿ ಅವನಿಗೆ ಬದುಕುವುದಕ್ಕೆ ಕನಿಷ್ಟ ಬೇಕಾಗುವಷ್ಟು ಗೌರವ ಧನ ಕೊಡುವುದು ಅಗತ್ಯವಿದೆಯೆಂದು ನನಗನ್ನಿಸುತ್ತದೆ. ದಯವಿಟ್ಟು ಇದನ್ನು ಪರಿಶೀಲನೆ ಮಾಡಿ 750 ರೂಪಾಯಿಗೆ ಏರಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಇವರು ದಿನಗೂಲಿ ನೌಕರರೂ ಅಲ್ಲ. ಸ್ಕೆಫಂಡರಿ ನೌಕರರು ಅಲ್ಲ. ಗೌರವಧನದ ಮೇಲೆ ಇವರನ್ನು ತೆಗೆದುಕೊಂಡಿದ್ದಾರೆ. ಇವರನ್ನು ಸರ್ಕಾರಿ ನೌಕರರೆಂದು ಯಾವ ಅಂಶದಲ್ಲಿಯೂ ಕೂಡ ಪರಿಗಣಿಸಲಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಗೌರವಧನವನ್ನಾದರೂ ಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಇಂತಹ ಮಂಡಲಗಳಲ್ಲಿ ನೇಮಕಾತಿ ಮಾಡುವಾಗ ಜವಾಬ್ದಾರಿವುಳ್ಳ ಸರ್ಕಾರಿ ನೌಕರರನ್ನು ಮಾಡಬೇಕೇ ಅಥವಾ ಅವರನ್ನು ಗ್ರಂಥಾಲಯ ನೌಕರರಾಗಿ ಪರಿಗಣಿಸಬೇಕೇ ಎಂಬ ಪ್ರಶ್ನೆ ಏನಿದೆ ಇದು ಮೂಲಭೂತವಾದ ಪ್ರಶ್ನೆಯಾಗಿದೆ. ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಇವರು ಮಂಡಲಕ್ಕೊಂದು ಗ್ರಂಥಾಲಯದ ಬಗ್ಗೆ ಮಾತನಾಡುತ್ತಿದ್ದಾರೆ. ಪ್ರತಿ ಗ್ರಾಮದಲ್ಲಿಯೂ, ಪ್ರತಿ ಕುಟುಂಬದವರೂ ಗ್ರಂಥಾಲಯ ಶುಲ್ಕವನ್ನು ಕೊಡುತ್ತಿದ್ದಾರೆ. ಅದನ್ನು ಪ್ರತಿಯಾಗಿ ತಾವು ಕನಿಷ್ಟ ಪ್ರತಿ ಗ್ರಾಮಕ್ಕೆ ಒಂದು ದಿನಪತ್ರಿಕೆಯನ್ನಾದರೂ ಕಳುಹಿಸುವ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಪ್ರೊ. ನಂಜುಂಡಸ್ವಾಮಿಯವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಇದನ್ನು ಕಾರ್ಯಗತ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಪ್ರೌಢಶಾಲೆಗಳಲ್ಲಿ ಖಾಲಿಯಿರುವ ಅಧ್ಯಾಪಕರ ಹುದ್ದೆಗಳ ಭರ್ತಿ

2201 - ಕೆ. ಸೋಮಪ್ಪ ಸುವರ್ಣ (ಮೂಡಬಿದ್ರಿ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಕೆಳಗಿನ ಪ್ರೌಢಶಾಲೆಗಳಲ್ಲಿ ಯಾವ ಯಾವ ಹುದ್ದೆಗಳು ಖಾಲಿ ಇವೆ.

1) ಮುಲ್ಕಿ

2) ಚಿತ್ರಾಪುರ

3) ಹಳಿಯಂಗಡಿ

4) ಮೂಡಬಿದ್ರಿ

5) ಹೊಸಬೆಟ್ಟು

6) ನಡುಗೋಡು

ಆ) ಅಧ್ಯಾಪಕರ ಕೊರತೆಯಿಂದ ಪಾಠ ಪ್ರವಚನಗಳಿಗೆ ತೊಂದರೆಯಾದ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ?

ಇ) ಅಧ್ಯಾಪಕರ ನೇಮಕಾತಿ ಎಂದು ಆಗುವುದು?